ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:529/2017

ಚಾಸಾ:4 ಪ್ರಾಸಾ:2

ದಿನಾಂಕ: 22.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಕೆ. ಎಂ ಉಪಧ್ಯಾಯ |
| ತಂದೆಯ ಹೆಸರು | : | ಕೆ. ಕೆ. ಮೂರ್ತಿ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ಕೋಟಾ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಬೀಜಾಡಿಯ ವೈ ಜಂಕ್ಷನ್ ಬಳಿ ದಿ: 10-12-2016 ರಂದು ಅಪಘಾತವಾದ ಹಿನ್ನೆಲೆಯಲ್ಲಿ ನಾನು ಮತ್ತು ಚಾಸಾ-3 ರವರು ಸ್ಥಳಕ್ಕೆ ಭೇಟಿ ನೀಡಿದ್ದು ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಸ್ವಲ್ಪ ಪಕ್ಕದಲ್ಲಿ ಟೊಯೋಟಾ ಕ್ವಾಲಿಸ್ ಕಾರು ನಿಲ್ಲಿಸಿದ್ದು, ಪೊಲೀಸರು ಪಂಚನಾಮೆ ಜರುಗಿಸಿ ನಕ್ಷೆ ತಯಾರಿಸಿ ಪೋಟೋ ತೆಗೆದು ವಾಹನವನ್ನು ವಶಕ್ಕೆ ಪಡೆದಿರುತ್ತಾರೆ. ಸದ್ರಿ ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 1-30ರವರೆಗೂ ಜರುಗಿಸಿರುತ್ತಾರೆ.

ಸಾಕ್ಷಿಗೆ ನಿಪಿ-2 ಮತ್ತು 3ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2(ಬಿ) ಮತ್ತು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-4 ರಿಂದ 6ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಕೆ ಯು ಎಸ್ ರವರಿಂದ:**

ನನ್ನದ್ದು ಮೆಡಿಕಲ್ ಶಾಪ್ ಇರುತ್ತದೆ. ಅಪಘಾತವಾದ ದಿನ ನಾನು ಅಂಗಡಿಯಲ್ಲಿ ಇದ್ದೆ. ಚಾಸಾ-1 ರವರು ಘಟನಾ ಸ್ಥಳಕ್ಕೆ ಬರುವಂತೆ ಕೋರಿಕೊಂಡಿರುತ್ತಾರೆ. ನಾನು ಮತ್ತು ಚಾಸಾ-3 ರವರು ಸ್ಥಳದಲ್ಲಿ ಸಹಿ ಮಾಡಿರುತ್ತೇವೆ. ಸದ್ರಿ ದಾಖಲೆಯಲ್ಲಿ ಅಪಘಾತವಾಗಿರುವ ಬಗ್ಗೆ ಯಾವ ಗಾಡಿಯಿಂದ ಅಪಘಾತವಾಗಿರುತ್ತದೆ ಎಂದು ಬರೆದಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ

ಕಾರು ಇತ್ತು. ಚಾಸಾ-1 ನನ್ನ ಸಂಬಂಧಿಕರು. ಪಿರ್ಯಾದುದಾರರು ನನ್ನ ಸಂಬಂಧಿಕರು ಆಗಿದ್ದು ಆತ ಸೂಚಿಸಿದಂತೆ ನಾನು ಠಾಣೆಗೆ ಭೇಟಿ ನೀಡಿ ಮೇಲೆ ಗುರುತಿಸಿದ ದಾಖಲೆಗಳಿಗೆ ಸಹಿ ಮಾಡಿದ್ದರೂ ಸಹ ಆತನಿಗೆ ಸಹಾಯ ಮಾಡಲು ಘಟನಾ ಸ್ಥಳದಲ್ಲಿ ಸಹಿ ಮಾಡಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**